(c) No budget provision was made for this work in 1979-80 owing to lack of funds for fresh works. Hence Sanction could not be given.

ಶ್ರೀ ಎಸ್. ಎಫ್. ಭೈರಿ.—ಈಗ ಅಲ್ಲಿಗೆ ೨೫ ಹಾಸಿಗೆಯುಳ್ಳ ಆಸ್ಪತ್ರೆ ಮಂಜೂರಾಗಿದೆ. ಅದನ್ನು ಈಗ ೩೦ಕ್ಕೆ ಹೆಚ್ಚಿಸಬೇಕಾಗಿದೆ. ಆಂದರೆ ೫ ಹಾಸಿಗೆಗಳನ್ನು ಜಾಸ್ತಿ ಮಾಡಲು ಹಣದ ಕೊರತೆ ಏನಾದರೂ ಇದೆಯೇ ?

ಶ್ರೀ ಆರ್. ಗುಂಡೂರಾವ್ —ಹಣಕಾಸಿನ ತೊಂದರೆ ಇರುವುದರಿಂದ ಇದನ್ನು ನಾವು ಸೇರಿಸಿಲ್ಲ. ಮುಂದೆ ಇದನ್ನು ಪರಿಶೀಲನೆ ಮಾಡೋಣ.

ಶ್ರೀ ಬಿ. ವಿ. ಕಕ್ಕೇರಾಯ.- ೫ ಬೆಡ್‌ಗಳನ್ನು ಜಾಸ್ತಿ ಮಾಡಲು ಹಣದ ಖರ್ಚು ಜಾಸ್ತಿ ಬರುವುದಿಲ್ಲ. ಜೊತೆಗೆ ಇದು ಹಿಂದುಳಿದ ಪ್ರದೇಶವಾದ ಕಾರಣ ಈ ಕೆಲಸವನ್ನು ಬಡ್ಜೆಟಿನಲ್ಲಿ ಸೇರಿಸಲು ಯೋಚನೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಇದನ್ನು ಪರಿಶೀಲನೆ ಮಾಡಿ ನೋಡುತ್ತೇವೆ.

Consolidation of I.C.R.C. Roads in Arakalgud Taluk

41. SRI K. B. MALLAPPA (Arakalgud).—Will the Chief Minister be pleased to state ;—

(a) the length of the I.C.R.C. roads in Arakalgud Taluk ;

(b) the extent of the roads consolidated ;

(c) the length of the taken over roads in charge of the Public Works Department ;

(d) what is the length of roads consolidated and asphalted during the year 1972-79 ?

SRI R. GUNDU RAO (Chief Minister).—

(a) 99.80 K.M.

(b) A length of 13.00 K.M. of I.C.R.C. roads have been metalled and consolidated in Arakalgud Taluk.

(c) 245.78 K.M. of roads have been taken over to Government (P.W.D.) for maintenance and improvements in Arakalgud Taluk since 1959.

(d) Out of the taken over roads, the following are the lengths of roads consolidated and asphalted during the years 72 to 79 in Arakalgud Taluk.

(a) Length metalled consolidated ...	59.60	K.M.
(b) Length Asphalted ...	6.00	K.M.

ಶ್ರೀ ಕೆ.ಬಿ. ಮಲ್ಲಪ್ಪ.—ಆರಕಲಗೂಡು ತಾಲ್ಲೂಕ್‌ನಲ್ಲಿ ೨೪೫.೭೮ ಕಿ.ಮೀ. ರಸ್ತೆಯನ್ನು ತೆಗೆದುಕೊಳ್ಳಲಾಗಿದೆ ಮತ್ತು ೧೯೭೨ ರಿಂದ ೧೯೭೯ ರವರೆಗೆ ೫೯.೬೦ ಕಿ.ಮೀ. ರಸ್ತೆಗೆ ಜಲ್ಲಿ ಹಾಕಿ ಗಟ್ಟಣಿ ಮಾಡಲಾಗಿದೆ ಎಂದು ಹೇಳಿದ್ದೀರಿ. ಆಂದರೆ ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಕಿಲೋಮೀಟರ್ ರಸ್ತೆಗಳಿಗೆ ಜಲ್ಲಿ ಹಾಕಲಾಯಿತೆಂಬುದನ್ನು ಹೇಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಆ ವಿವರಗಳು ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿ ಕೊಡುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ.—ಕಳೆದ ೮ ವರ್ಷಗಳ ಅವಧಿಯಲ್ಲಿ ೬ ಕಿ ಮೀ. ರಸ್ತೆಗೆ ಮಾತ್ರ ಟಾರು ಹಾಕಲಾಗಿದೆ. ಅಂದರೆ ನಮ್ಮ ತಾಲ್ಲೂಕಿನಲ್ಲಿ ಈ ಟಾರ್ ಹಾಕುವ ಕೆಲಸ ಸರಿಯಾಗಿ ನಡೆದಿಲ್ಲವೆಂಬುದು ಈ ಉತ್ತರದಿಂದ ತಿಳಿದು ಬರುತ್ತದೆ. ಇನ್ನು ಮುಂದೆಯಾದರೂ ಹೆಚ್ಚಿನ ರಸ್ತೆಗಳಿಗೆ ಟಾರ್ ಹಾಕಿಸಲು ಮತ್ತು ಕೆಟ್ಟಿರುವ ರಸ್ತೆಗಳನ್ನು ರಿಪೇರಿ ಮಾಡಿಸಲು ವ್ಯವಸ್ಥೆ ಮಾಡುತ್ತೀರಾ ? ಮಂತ್ತು ರಸ್ತೆಗಳು ಇಲ್ಲದಿರುವ ಕಡೆಗಳಿಗೆ ರಸ್ತೆಗಳನ್ನು ಮಾಡಿಸುವುದಕ್ಕೆ ಭರವಸೆ ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಈಗ ಯಾವುದೇ ನಿರ್ದಿಷ್ಟವಾದ ಭರವಸೆ ಕೊಡುವುದಕ್ಕಾಗುವುದಿಲ್ಲ. ಯಾವ ಯಾವ ರಸ್ತೆಗಳನ್ನು ಮಾಡಿಸುವುದು ಮುಖ್ಯವಿದೆಯೋ, ಅದನ್ನು ನೋಡಿಕೊಂಡು ಮಾಡುತ್ತೇವೆ.

ಶ್ರೀ ಎ.ಜಿ. ಕೊಡಗಿ.—ಇದು ಕೇವಲ ಆರಕಲಗೂಡಿಗೆ ಮಾತ್ರ ಸೀಮಿತವಾಗಿಲ್ಲ. ಈ ಐಸಿಆರ್‌ಸಿ ರಸ್ತೆಗಳ ಕೆಲಸವನ್ನು ನಮ್ಮ ರಾಜ್ಯದಲ್ಲಿ ೧೯೭೨ರಲ್ಲಿ ತೆಗೆದುಕೊಳ್ಳಲಾಯಿತು. ಆದರೆ ಇಲ್ಲಿ ಕೊಟ್ಟಿರುವ ಉತ್ತರವನ್ನು ನೋಡಿದರೆ ಜಿಲ್ಲೆ ಹಾಕಿರುವ ಕೆಲಸ ಸರಿಯಾಗಿ ನಡೆದಿಲ್ಲವೆಂಬುದು ಅರ್ಥವಾಗುತ್ತದೆ. ನಮ್ಮ ಮಲೆನಾಡಿನ ಭಾಗದಲ್ಲಿಯೂ ಅನೇಕ ಕಡೆಗಳಲ್ಲಿ ರಸ್ತೆಗಳ ರಿಪೇರಿಯಾಗಿಲ್ಲ. ಕೆಲವು ರಸ್ತೆಗಳಿಗೆ ಟಾರು ಹಾಕಲಾಗಿದೆ. ಆದರೆ ಅದರ ರಿಪೇರಿ ಕೆಲಸವಾಗಿಲ್ಲ. ಆದಕಾರಣ ಈ ವಿಚಾರದಲ್ಲಿ ಸರ್ಕಾರದ ಧೋರಣೆ ಏನೆಂಬುದನ್ನು ನಾನು ಸರ್ಕಾರದಿಂದ ತಿಳಿಯಬಯಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ನಾನೂ ಸಹ ಮಲೆನಾಡಿನಿಂದ ಬಂದಿರುವವನು. ನನಗೂ ಸಹ ಇದು ಗೊತ್ತಿದೆ ಇಲ್ಲಿ ಪ್ರಶ್ನೆ ಇರುವುದು ಆರಕಲಗೂಡಿನ ಯಾವುದೋ ರಸ್ತೆಯ ಬಗ್ಗೆ, ಆದರೆ ಮಾನ್ಯ ಸದಸ್ಯರು ಜನರಲ್ ಆಗಿ ಪ್ರಶ್ನೆ ಕೇಳಿದ್ದಾರೆ. ಈ ಬಗ್ಗೆ ಅವರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಕೆ.ಬಿ. ಮಲ್ಲಪ್ಪ.—ನಾನು ಯಾವುದೋ ರಸ್ತೆಯ ಬಗ್ಗೆ ಕೇಳಿಲ್ಲ, ನಮ್ಮ ತಾಲ್ಲೂಕ್ ಬಗ್ಗೆ ಕೇಳಿದ್ದೇನೆ; ನಮ್ಮ ತಾಲ್ಲೂಕ್‌ನಲ್ಲಿ ಇಲ್ಲಿಯವರೆಗೆ ೨೪೫.೭೪ ಕಿ.ಮೀ. ರಸ್ತೆಯನ್ನು ನಿರ್ವಹಣೆ ಹಾಗೂ ಅದನ್ನು ಉತ್ತಮಗೊಳಿಸಲು ಸರ್ಕಾರದವರು ವಹಿಸಿಕೊಂಡ ಮೇಲೆ ರಸ್ತೆಗಳ ರಿಪೇರಿಯಾಗದೆ ಜನರು ಹಾಗೂ ವಾಹನಗಳು ಓಡಾಡಲು ಅನಾನುಕೂಲವಾಗಿದೆ. ಈ ರಸ್ತೆಗಳ ಮೇಲೆ ಒಂದು ಮಂಕರಿ ಮಣ್ಣನ್ನು ಸಹ ಇಲ್ಲಿಯವರೆಗೆ ಹಾಕಿಲ್ಲ. ಇಂತಹ ಸಂದರ್ಭದಲ್ಲಿ ಇವುಗಳ ರಿಪೇರಿ ಮಾಡಿಸಲು ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ನಾನು ಮೊದಲೇ ಹೇಳಿದೆ. ಅಲ್ಲಿ ರಸ್ತೆಗಳು ಹಾಳಾಗಿವೆ ಎಂಬುದು ನನಗೂ ಗೊತ್ತಿದೆ. ಆರಕಲಗೂಡು ನಮ್ಮ ಪಕ್ಕದ ತಾಲ್ಲೂಕ್. ಇದಕ್ಕೆ ಯಾವ ರೀತಿ ಹಣ ಒದಗಿಸ ಬೇಕೆಂಬುದನ್ನು ನಮ್ಮ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಹಣದ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Fire Accident in Kulibeed Village of North Kanara District

56. SMT. ANASUYA G. SHARMA (Ankola).—Will the Minister for Revenue and Agriculture be pleased to state:—

(a) whether Government is aware that a fire accident took place in Kulibeed village of Sirsi taluk, North Kanara district, some time in middle of May 1979 ;

(b) if so, what was the extent of loss of property and damages caused on account of this fire accident ;